Amendment of Police Act

508. Sri S. M. SHEERNALY CHANDRASHEKHAR (Hosanagar).—

Will the Chief Minister be pleased to state :—

(*a*) whether there is any proposal before Government to amend the Police Act so as to fix a time limit between placing first information report and filing a charge sheet by the Police in a Court of law ;

(*b*) if so, the action taken by the Government in this behalf ?

Sri H. M. CHANNABASAPPA (Minister for Public Works and Electricity [On helalf of) SRI DEVARAJ URS (Chief Minister)]

(*a*) No.

(*b*) Does not arise in view of reply to clause (*a*).

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ.— ಎಫ್. ಐ. ಆರ್. ಕೊಟ್ಟು ಛಾರ್ಜ್‌ಷೀಟ್ ಹಾಕುವುದಕ್ಕೆ ಕಾಲವಧಿ ಜಾಸ್ತಿಯಾಗುವುದರಿಂದ ಕೆಲವು ಸಲ ತೊಂದರೆಯಾಗುವುದು. ಅಪರಾಧಿಯಲ್ಲದಿರುವವರು ಅಥವ ಅಪರಾಧಿ ಆಗಿರುವವರಿಗೆ ಕೆಲವು ಸಂದರ್ಭಗಳಲ್ಲಿ ತೊಂದರೆಯಾಗುವುದು ಛಾರ್ಜ್‌ಷೀಟ್ ಕಾಕುವವರೆಗೆ ಕೋರ್ಟಿನಲ್ಲಿ ಬೇಲ್ ಮೇರೆ ಬಿಡುವುದಕ್ಕಾಗುವದಿಲ್ಲ. ಪೋಲೀಸ್ ಸ್ಟೇಷನಿಂದಲೂ ಬಿಡುವುದಿಲ್ಲ. ಇದರಿಂದ ತೊಂದರೆ ಯಾಗುವುದನ್ನು ತಪ್ಪಿಸುವಿರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರ ಕೊಟ್ಟಿರುವುದು ಸರಿಯಾಗಿದೆ, ಮಾನ್ಯ ಸದಸ್ಯರು ಹೇಳುವಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ. The law pertaining to investigation and charge-sheeting is Criminal Procedure Code and not the Police Act

Sri S. M. YAHYA.—The Minister stated that the matter pertains to Criminal Procedure Code. Since the Law Commission has already recommended the matter relating to investigation and report, whether the Government would consider the recommendation of the Law Commission so far as these matters are concerned ?

Sri H. M. CHANNABASAPPA.—The question is totally different from the present question. The present question is only pertaining to amendment of Police Act. Whether Police Act to be amended on the report of the Law Commission, that is a different issue altogether.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ.—ಈಗಿರುವ ಪೋಲೀಸ್ ಆಕ್ಟಿನಿಂದ ಜನರಿಗೆ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದನ್ನು ನೂಕ್ಕ ರೀತಿಯಲ್ಲಿ ಬದಲಾಯಿಸುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.- ಪೋಲೀಸ್ ಆಕ್ಟ್ ಈಗೇನಿದೆ ಅದರಿಂದ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗಿರುವುದು ಹಿನದಿನ ಕಾಲದ ಆಕ್ಟ್. ಈಗ ಆಧುನಿಕ ರೀತಿ ಯಲ್ಲಿ ಆರ್ ಇಂಡಿಯಾ ಪೋಲೀಸ್ ಆಕ್ಟ್ ಪ್ರಕಾರ ತಿದ್ದುಪಡಿಮಾಡಲು ಪ್ರಯತ್ನ ಮಾಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಿರುವ ಪೋಲೀಸ್ ಆಕ್ಟಿನಿಂದ ಸಾರ್ವಜನಿಕರ ಹಿತಕ್ಕೆ ಧಕ್ಕೆ ಬಂದಿದೆ ಎಂಬುದು ಸರಕಾರದ ಗಮನಕ್ಕೆ ಬಂದಿಲ್ಲ. ಅಂಥಾದ್ದೇನಾದರೂ ಗಮನಕ್ಕೆ ಬಂದರೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಯೋಚನೆಮಾಡಲಾಗುತ್ತದೆ.